# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1075 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ವೈ. ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 17.03.2025 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬಳ್ಳಾರಿ, ವಿಜಯನಗರ ಮತ್ತು ಹಾವೇರಿ ಜಿಲ್ಲೆಗಳ ಪಡಿತರ ಚೀಟಿಗಳಿಗೆ ನೀಡಬೇಕಾಗಿದ್ದ ಬಿಳಿ ಜೋಳದ ದಾಸ್ತಾನು ಬಳ್ಳಾರಿಯ ರಾಜ್ಯ ಉಗ್ರಾಣದಲ್ಲಿ ಕೊಳೆತು ಹುಳುಗಳು ಬಿದ್ದಿರುವುದು ನಿಜವೇ; ಹಾಗಿದ್ದಲ್ಲಿ, ಬಡ ಪಡಿತರದಾರರಿಗೆ ನೀಡದೆ ಈ ರೀತಿ ವ್ಯರ್ಥ ಮಾಡಲು ಕಾರಣವೇನು; (ಮಾಹಿತಿ ಒದಗಿಸುವುದು) | 2023-24 ನೇ ಸಾಲಿನ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಬಳ್ಳಾರಿ ಜಿಲ್ಲೆಯಲ್ಲಿ ಖರೀದಿಸಿ ಸಂಗ್ರಹಿಸಿಡಲಾಗಿದ್ದ ಜೋಳದ ಪೈಕಿ 14240.09 ಕ್ವಿಂಟಾಲ್ ಜೋಳದ ಗುಣಮಟ್ಟವು ಹಾಳಾಗಿದ್ದು, ಮಾನವ ಉಪಯೋಗಕ್ಕೆ ಯೋಗ್ಯವಲ್ಲವೆಂದು ಪ್ರಮಾಣೀಕೃತ ಲ್ಯಾಬ್‌ನಿಂದ ವರದಿಯಾಗಿರುತ್ತದೆ.<br>ಮೊದಲು ಸಂಗ್ರಹಿಸಲಾಗಿದ್ದ ಜೋಳವನ್ನು ಮೊದಲು ಹಂಚಿಕೆಗೆ ಬಿಡುಗಡೆ ಮಾಡದ ಕಾರಣ ಮತ್ತು ಕಾಲಕಾಲಕ್ಕೆ ಜೋಳದ ಗುಣಮಟ್ಟ ಹಾಳಾಗದಂತೆ fumigation ಮಾಡದ ಕಾರಣ ಜೋಳದ ಗುಣಮಟ್ಟವು ಹಾಳಾಗಿರುವುದು ವರದಿಯಾಗಿರುತ್ತದೆ.<br>ಆದ್ದರಿಂದ ಸದರಿ ಜೋಳವನ್ನು ಹಂಚಿಕೆಗೆ ಪರಿಗಣಿಸಿರುವುದಿಲ್ಲ. ಬದಲಾಗಿ ಅಕ್ಕಿಯನ್ನೇ ಪಡಿತರ ಚೀಟಿದಾರರಿಗೆ ಹಂಚಿಕೆ ನೀಡಲು ನಿರ್ದೇಶನ ನೀಡಲಾಗಿರುತ್ತದೆ. |
| ಆ | ಈ ಬಗ್ಗೆ ಉಪಲೋಕಾಯುಕ್ತರು ದೂರು ದಾಖಲಿಸಿಕೊಂಡಿರುವುದು ನಿಜವೇ; ಯಾರ ಮೇಲೆ ದೂರು ದಾಖಲಿಸಿಕೊಳ್ಳಲಾಗಿದೆ; (ವಿವರಗಳೊಂದಿಗೆ ಮಾಹಿತಿ ಒದಗಿಸುವುದು) | ಬಳ್ಳಾರಿ ಜಿಲ್ಲೆಯಲ್ಲಿ ಈ ಕೆಳಕಂಡ ಅಧಿಕಾರಿ/ ಸಿಬ್ಬಂದಿಗಳ ವಿರುದ್ಧ ಮಾನ್ಯ ಉಪಲೋಕಾಯುಕ್ತರು ದೂರು ದಾಖಲು ಮಾಡಿಕೊಂಡಿರುತ್ತಾರೆ.<br>1. ಕು. ಶರಾವತಿ ತಾಂತ್ರಿಕ ಸಹಾಯಕಿ ಹಾಗೂ ಉಗ್ರಾಣ ವ್ಯವಸ್ಥಾಪಕರು (ಪ್ರಭಾರ), ಉಗ್ರಾಣ ಘಟಕ-2 ಕರ್ನಾಟಕ ರಾಜ್ಯ ಉಗ್ರಾಣ ನಿಗಮ, ಬಂಡಿಮೋಟ್ ಬಳ್ಳಾರಿ.<br>2. ಶ್ರೀ ಜಯತೀರ್ಥ, ಪ್ರಾದೇಶಿಕ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಉಗ್ರಾಣ ನಿಗಮ, ರಾಯಚೂರು.<br>3. ಶ್ರೀಮತಿ ಸಕೀನಾ, ಉಪನಿರ್ದೇಶಕರು, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬಳ್ಳಾರಿ |

| | | |
|---|---|---|
| ಇ | ಈ ರೀತಿ ಲಕ್ಷಾಂತರ ಕ್ವಿಂಟಾಲ್ ಧಾನ್ಯ ಕೊಳೆತು ಹುಳ ಹಿಡಿಯಲು ಸರ್ಕಾರಕ್ಕೆ ಮತ್ತು ಜನರಿಗೆ ದ್ರೋಹ ಎಸಗಿರುವ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು; | 14240.09 ಕ್ವಿಂಟಾಲ್ ಪ್ರಮಾಣದ ಜೋಳದ ದಾಸ್ತಾನಿನ ಗುಣಮಟ್ಟವನ್ನು ಕಾಪಾಡಿಕೊಳ್ಳಲು ವಿಫಲರಾದ ಕಾರಣ ಸಂಬಂಧಪಟ್ಟ ಏಜೆನ್ಸಿ ಮತ್ತು ಉಗ್ರಾಣ ನಿಗಮದವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಆಯುಕ್ತರು, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇವರಿಗೆ ಸೂಚಿಸಲಾಗಿರುತ್ತದೆ. |
| ಈ | ಸರ್ಕಾರವು ಮುಂದೆ ಈ ರೀತಿಯಲ್ಲಿ ಆಹಾರ ಧಾನ್ಯಗಳು ಕೊಳೆತು ಹಾಳಾಗದಂತೆ ಎಚ್ಚರವಹಿಸಲು ಸರ್ಕಾರದ ನಿರ್ಧಾರಗಳೇನು? (ವಿವರಗಳೊಂದಿಗೆ ಮಾಹಿತಿ ಒದಗಿಸುವುದು) | 2024-25 ನೇ ಸಾಲಿನ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಕೇಂದ್ರ ನಿರ್ಧಾರಿತ ಗುಣಮಟ್ಟದ ಮಾನದಂಡಗಳಂತೆ ಗುಣಮಟ್ಟ ಪರಿಶೀಲನೆಗೆ ನೇಮಿಸಿದ ಗ್ರೇಡರ್/ ಅಸ್ಸೇಯರ್ಸ್‌ರಿಂದ ಧೃಢೀಕರಿಸಿದ ಆಹಾರಧಾನ್ಯಗಳನ್ನು ಖರೀದಿಸಲು ಹಾಗೂ ಸಂಗ್ರಹಣಾ ಕೇಂದ್ರದಲ್ಲಿ ದಾಸ್ತಾನಿರಿಸಿದ ಆಹಾರಧಾನ್ಯ ಗುಣಮಟ್ಟ ಕಾಪಾಡಲು ಅಗತ್ಯ ಕ್ರಮವಹಿಸಿ ಕೇಂದ್ರ ನಿರ್ಧಾರಿತ Shelf life ಅನುಸಾರವಾಗಿ FIFO (First in First out) ಪದ್ಧತಿ ಅನುಸರಿಸಿ ಸಾರ್ವಜನಿಕ ವಿತರಣಾ ಪದ್ಧತಿಯಡಿ ಹಂಚಿಕೆಗೆ ಕ್ರಮವಹಿಸಲು ಸಂಬಂಧಪಟ್ಟವರಿಗೆ ಅಗತ್ಯ ಸೂಚನೆ ನೀಡಲಾಗುತ್ತಿದೆ. |

ಇ-ಆನಾಸ 59 ಆರ್‌ಪಿಆರ್ 2025

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು